ಹಾಸನದ ಚನ್ನರಾಯಪಟ್ಟಣದವರಾದ ಪ್ರಭಾಮಣಿ ನಾಗರಾಜ್ ಅವರು ಕವಿತೆ, ಕಥೆ, ಲಲಿತ ಪ್ರಬಂಧಗಳ ಮೂಲಕ ಕನ್ನಡ ಸಾಹಿತ್ಯವಲಯದಲ್ಲಿ ಗುರುತಿಸಿಕೊಂಡವರು. ಮೈಸೂರಿನಲ್ಲಿ ಪದವಿ ಓದಿದ ಅವರು, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವಿಷಯ ಪರಿವೀಕ್ಷಕರಾಗಿ ಕೆಲಸ ನಿರ್ವಹಿಸಿದ್ದಾರೆ. ಪ್ರಸ್ತುತ ಹಾಸನದಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. 'ಗರಿಕೆ', 'ಕಂಡಷ್ಟೇ ಬೆಳಕೆ?' (ಕವನ ಸಂಕಲನ), 'ನಾವೀಗ ಹೊಸಬರಾಗಬೇಕು....'(ಕಥಾ ಸಂಕಲನ) ಸೇರಿದಂತೆ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ.

ಕವಿಗೋಷ್ಠಿಯಲ್ಲಿ ಭಾಗವಹಿಸಿ ಬಂದ ಸಡಗರದಲ್ಲೇ ಇದ್ದಾಗ ಅಕಸ್ಮಾತ್ತಾಗಿ ಭೇಟಿಯಾದ ಒಬ್ಬ ಸಾಹಿತಿ ಮಹಾಶಯರೊಡನೆ ಆ ಬಗ್ಗೆ ಮಾತನಾಡುವಾಗ ಅವರು 'ಪ್ರಧಾನ ಗೋಷ್ಠಿಗೆ ಹೋಗಿದ್ದೀರಾ?' ಎಂದು ಕೇಳಿದರು. ಇದೇನಿದು ಎಂಬ ಗಾಬರಿಯಲ್ಲಿ ನಾನಿದ್ದಾಗ. 'ಎಲ್ಲಿ ನಡೆಯಿತು?' ಎಂಬ ಮತ್ತೊಂದು ಕೂರಂಬನ್ನು ನನ್ನತ್ತ ಎಸೆದರು. ಓಹೋ ಎಂದುಕೊಂಡು ನಾನು ಸ್ಥಳ ಮಾಹಿತಿಯನ್ನು ನೀಡಿದಾಗ, 'ಹೌದಾ. ನಾನು ಈ ಮೊದಲೇ ಪ್ರಧಾನ ಗೋಷ್ಠಿಗೇ ಹೋಗಿದ್ದೆ' ಎಂದು ಕಾಲರ್‌ಅಪ್ ಮಾಡಿಕೊಂಡರು! ಅಂದಿನಿಂದ ಸ್ವಲ್ಪ ಜಾಗರೂಕಳಾಗಿರಬೇಕೆಂಬ ತೀರ್ಮಾನ ಮಾಡಿದೆ.

ಈಗಿನ ಹೆಚ್ಚುತ್ತಿರುವ ಕವಿಗಳ ಸಂಖ್ಯಾಬಾಹುಳ್ಯದ ಕಾಲಮಾನಕ್ಕೆ ಅರ್ಜಿಯನ್ನು ಆಹ್ವಾನಿಸುವ ಈ ವಿಧಾನವೇ ಸೂಕ್ತವೇನೋ ಎಂದು ನನ್ನನ್ನು ನಾನೇ ಸಮಾಧಾನಿಸಿಕೊಂಡೆ. ವಿವರಗಳ ಮೇಲೆ ಕಣ್ಣಾಡಿಸಿದಾಗ ಚಿಗುರು ಕವಿಗೋಷ್ಠಿ, ಯುವ ಕವಿಗೋಷ್ಠಿ, ಮಹಿಳಾ ಕವಿಗೋಷ್ಠಿ... ಎಂಬ ವಿಭಾಗಗಳೂ ರಾರಾಜಿಸಿದವು. 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಗಸು...'

ನನ್ನ ಜೊತೆಯಿದ್ದವರೆನಿಸಿಕೊಂಡವರೆಲ್ಲಾ ಕ್ರಮಿಸುತ್ತಿದ್ದ ಕಾಲಮಾನದೊಂದಿಗೆ ತಮ್ಮ ಸ್ವಪ್ರಯತ್ನದಿಂದಲೋ, ಪ್ರಭಾವದಿಂದಲೋ, ಪ್ರೇರಣೆಯಿಂದಲೋ... ಲೋ... ಲೋ... ಲೋ ತಮ್ಮ ಸ್ಥಾನಮಾನಗಳನ್ನೂ ಉನ್ನತೀಕರಿಸಿಕೊಂಡು, ಇನ್ನು ಮುಂದೆ ನಿರೂಪಣೆ ಮಾಡಲ್ಲ, ಸಾಮಾನ್ಯ ಕವಿಗೋಷ್ಠಿಗಳಲ್ಲಿ ಕವನ ಓದಲ್ಲ,... ಮುಂತಾದ ಸ್ವೋನ್ನತೀಕರಣ ತೀರ್ಮಾನಗಳಿಂದ ಸಾಮಾನ್ಯಾತೀತರಾಗಿ ಅತಿಥಿ, ಮುಖ್ಯ ಅತಿಥಿ, ಅಧ್ಯಕ್ಷ ಸ್ಥಾನಗಳನ್ನು ಮಾತ್ರ ಅಲಂಕರಿಸುತ್ತಾ ಗಂಭೀರವದನರಾಗಿ ಗಮಿಸುತ್ತಿದ್ದಾಗ ಈ ಯಾವ ಪರಿವೆಯೂ ಇಲ್ಲದೆ ಹರಿವ ನದಿಯಲ್ಲಿ ದಡಕ್ಕಂಟಿ ಕುಳಿತ ಕಿರು ಬಂಡೆಯಂತಿದ್ದ ನಾನು ನನ್ನ ಮುಂದಿನ ನಡೆಯ ಬಗ್ಗೆ ಸ್ಪಷ್ಟತೆ ಇಲ್ಲದಂತೆ ಸ್ವಾನಂದ ತಲ್ಲೀನಳಾಗಿದ್ದಾಗಲೇ ನಡೆದುಹೋದ ಅನೇಕ ಕವಿಗೋಷ್ಠಿಗಳ ಕವಿಗಳ ಪಟ್ಟಿಯಲ್ಲಿ ಕಿರಿಯ ಕವಿಗಳ ನಡುವೆ ನನ್ನ ಹೆಸರು ಮಾತ್ರ ರಾರಾಜಿಸಿ ವೇದಿಕೆಯಲ್ಲಿ ನನ್ನ ಅನುಪಸ್ಥಿತಿಯಿಂದ ಹೊಸ ಸಾಹಿತಿ ಪೀಳಿಗೆಗೆ ನಾನಾರೆಂದು ತಿಳಿಯದಂತಾಗಿ ಅಜ್ಞಾತವಾಸಕ್ಕೆ ಮೊದಲಿಟ್ಟೆತು.

ಈ ನಡುವೆ ಒಂದೆರಡು ಕವಿಗೋಷ್ಠಿಗಳ ಅಧ್ಯಕ್ಷ ಸ್ಥಾನದ ಕುರ್ಚಿಯಲ್ಲಿಯೂ ಅಪ್ಪಿತಪ್ಪಿ ಕುಳಿತಿದ್ದೂ ಆಯ್ತು. ನಂತರವೂ ಅಗಣಿತ ತಾರಾಗಣಗಳ ನಡುವೆ ಚಿರಧ್ರುವತಾರೆಯಂತೆ ಕವಿಗೋಷ್ಠಿಯಲ್ಲಿ ಕವಿಗಳ ಪಟ್ಟಿಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿರುವ ನನ್ನ ಹೆಸರು ನನ್ನ ಅಸ್ತಿತ್ವದ ಸೂಚಕವಾಗಿದೆಯೇನೋ ಎಂದೂ ಒಮ್ಮೊಮ್ಮೆ ಅನಿಸುವಂತಾಯ್ತು. ಹಿಂದೆ ಹಾಲು ಮೊಸರು ಮಾರಲು ಕುಕ್ಕೆಯಲ್ಲಿ ಹೊತ್ತು ತರುತ್ತಿದ್ದವರು ಹಾಲು ಕೊಂಡಾಗ ಮೇಲೆ ಕೊಸರು ಎಂದು ಸ್ವಲ್ಪ ಹಾಲನ್ನು ಹಾಕುತ್ತಿದ್ದರು. ಹಾಗೇ ಇದೂ ಏನಾದರೂ...!

ನಿವೃತ್ತಿಯ ದಶಕ ಸಮೀಪಿಸುತ್ತಿರುವ ಈ ಸವಿ ಸಂದರ್ಭದಲ್ಲಿ ನನ್ನ ಹಿರಿತನವನ್ನು ಗೌರವಿಸಿ, 'ಇನ್ನಾದರೂ ನನ್ನನ್ನು ಇಂಥಾ ಕವಿಗೋಷ್ಠಿಗಳಲ್ಲಿ ಕವನ ವಾಚಿಸಲು ಹಾಕಿಕೊಳ್ಳಬೇಡಿ' ಎಂದು ಹೇಳೋಣವೆಂದರೆ, 'ಅತ್ತೂ ಕರೆದು ಔತಣಕ್ಕೆ ಹೇಳಿಸಿಕೊಂಡಂತೆ' ನನ್ನ ಸ್ಥಾನವನ್ನು ಸ್ವಲ್ಪ ಮೇಲೇರಿಸಿ ಎಂದು ನಾನೇ ಸೂಚನೆ ಕೊಟ್ಟಂತಾಗುತ್ತದೆಯೇನೊ! ಆದರೂ ಆರಕ್ಕೇರದೆ ಮೂರಕ್ಕಿಳಿಯದೆ ಇರುವ ನನ್ನ ಈ ಸ್ಥಿರ ಸ್ಥಿತಿಗೆ ನನ್ನ ನಾನೇ ಬೆನ್ನುತಟ್ಟಿಕೊಳ್ಳುತ್ತಾ ಆರು-ಮೂರನ್ನು ಮೀರಿ ಭಗವಂತನನ್ನು ಸೇರುವತ್ತ ಗಮನಹರಿಸಬೇಕೆಂದಿದ್ದೇನೆ. •